# ಅಮೆರಿಕದಲ್ಲಿ ರಣಬಿಸಿಲು!



ಕೂಲ್‌ಸೆಂಟರ್ ಮುಂದಿನ ದೃಶ್ಯ



ಕೆಲಸ ಮಾಡುವವರಿಗೆ ಇಂಟರ್‌ನೆಟ್ ಸೌಲಭ್ಯ

**ಜನರು ಬಿಸಿಲಿನಿಂದ ಬಸವಳಿಯದಂತೆ ಇಲ್ಲಿನ ಸರ್ಕಾರ ಅಲ್ಲಲ್ಲಿ 'ಕೂಲ್ ಸೆಂಟರ್'ಗಳನ್ನು ಸ್ಥಾಪಿಸಿದೆ. ಜನರು ಹಗಲಿಡೀ ಈ ಸೆಂಟರ್‌ಗಳಲ್ಲೇ ಉಳಿದುಕೊಳ್ಳುತ್ತಾರೆ.**

■ ಚಿತ್ರ– ಲೇಖನ: **ನಿರ್ಮಲಾ ವಿ. ಬೀಳಗಿ**

ಅಮೆರಿಕದ ಒರೆಗಾನ್ ರಾಜ್ಯದಲ್ಲಿ 'ಕೂಲ್ ಸೆಂಟರ್' ಒಂದರಲ್ಲಿ ಕುಳಿತೇ ಈ ಲೇಖನ ಬರೆಯುತ್ತಿದ್ದೇನೆ. ಜುಲೈ– ಆಗಸ್ಟ್ ತಿಂಗಳ ರಣಬಿಸಿಲು ಇಲ್ಲಿ ಎಲ್ಲರ ಜೀವ ಹಿಂಡುತ್ತದೆ! ಕೆಲವು ದಿನ ಹೀಟ್‌ವೇವ್ ಅಬ್ಬರ. ಬಿಸಿಲಿನ ಪ್ರಕೋಪ ಜನರನ್ನು ಕಂಗೆಡಿಸುತ್ತದೆ. ಆದರೆ ಇಲ್ಲಿನ ಸರ್ಕಾರ ಕರುಣಾಮಯಿ. ಜನರಿಗೆ ಉಚಿತ ಕೂಲ್ ಸೆಂಟರ್‌ಗಳನ್ನು ಸ್ಥಾಪಿಸಿದೆ. ವಯೋವೃದ್ಧರಂತೂ ಈ ಕೂಲ್‌ಸೆಂಟರ್‌ಗಳನ್ನು ಹೆಚ್ಚು ನಂಬಿಕೊಂಡಿದ್ದಾರೆ. ಸರ್ಕಾರ ವಾರಕ್ಕಿಂತ ಮುಂಚೆಯೇ ಮಾಧ್ಯಮಗಳಲ್ಲಿ ಬಿಸಿಗಾಳಿಯ ಹೊಡೆತದ ಬಗ್ಗೆ ಸುದ್ದಿ ಪ್ರಸಾರ ಮಾಡಿ ಜನರನ್ನು ಎಚ್ಚರಿಸುತ್ತದೆ. ಇಲ್ಲಿ ಬೇಸಿಗೆಯಲ್ಲಿ ಬಿಸಿಗಾಳಿಗೆ ಬಲಿಯಾಗುವವರ ಸಂಖ್ಯೆಯೂ ಸಾಕಷ್ಟಿದೆ.

ನಾವು ವಿಜಯಪುರದ ಬಿಸಿಲಲ್ಲೇ ಬೆಳೆದವರು. ಆದರೆ ಈ ಅಮೆರಿಕದ ಪ್ರಖರ ಬಿಸಿಲು ತಡೆಯುವುದು ಬಹಳ ಕಷ್ಟ. ಇಲ್ಲಿಯವರಿಗೆ ಅದು ಇನ್ನಷ್ಟು ತ್ರಾಸ. ಅದಕ್ಕೆಂದೇ ಸರ್ಕಾರದವರು ಕಮ್ಯುನಿಟಿ ಸೆಂಟರ್, ಸಿಟಿ ಹಾಲ್, ಲೈಬ್ರರಿ, ಶಾಪಿಂಗ್ ಮಾಲ್‌ಗಳಲ್ಲಿ 'ಕೂಲ್ ಸೆಂಟರ್' ವ್ಯವಸ್ಥೆ ಮಾಡಿದ್ದಾರೆ. ಸ್ಕೂಲ್‌ಗಳಲ್ಲಿರುವ ಸ್ವಿಮ್ಮಿಂಗ್‌ಪೂಲ್‌ಗಳಲ್ಲೂ ಅವಕಾಶ ಒದಗಿಸಲಾಗಿದೆ.

ಈ ಕೂಲ್ ಸೆಂಟರ್‌ಗಳಲ್ಲಿ ಇರುವ ಲೈಬ್ರರಿಗಳಲ್ಲಿ ಆರಾಮವಾಗಿ ಕುಳಿತುಕೊಳ್ಳಬಹುದು. ಉಚಿತ ಪುಸ್ತಕಗಳು, ಪತ್ರಿಕೆಗಳು ಓದಲು

(8ನೇ ಪುಟ ನೋಡಿ)